ಲೋಕೋಪಯೋಗಿ ರಸ್ತೆಗಳ ಅಭಿವೃದ್ಧಿ

57 (149) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಲೋಕೋಪಯೋಗಿ ರಸ್ತೆಗಳ ಉದ್ದವೆಷ್ಟು;

ಆ) 1999-2000 ನಂತರ ಅಭಿವೃದ್ಧಿಪಡಿಸಲಾದ ರಸ್ತೆಗಳ ವಿವರ ಹಾಗೂ ಖರ್ಚಾದ ಹಣವೆಷ್ಟು; (ವಿವರ ನೀಡುವುದು)

ಇ) ಬಾಕಿ ಉಳಿದಿರುವ ರಸ್ತೆಗಳ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವೆಷ್ಟು;

ಈ) ಯಾವಾಗ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳ ಉದ್ದ 132.00 ಕಿಮೀ ಇದ್ದು ಇದರಲ್ಲಿ 10.30 ಕಿಮೀ ರಾಜ್ಯ ಹೆದ್ದಾರಿ ಮತ್ತು 123.70 ಕಿಮೀ ಜಿಲ್ಲಾ ಮುಖ್ಯ ರಸ್ತೆ ಇರುತ್ತದೆ.

ಆ) 1999-2000 ನಂತರ ಅಭಿವೃದ್ಧಿ ಪಡಿಸಲಾದ ರಸ್ತೆಗಳ ವಿವರ ಹಾಗೂ ಖರ್ಚಾದ ಹಣದ ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ "ಅ" ನಲ್ಲಿ ನೀಡಿದೆ.

ಇ) ಬಾಕಿ ಉಳಿದಿರುವ ರಸ್ತೆಗಳ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನ ಈ ಕೆಳಗಿನಂತಿದೆ.

1.	ಕೇಂದ್ರ ರಸ್ತೆ ನಿಧಿ ಯೋಜನೆ (ಉಡುಪಿ ತಾ: ಸೀತಾನದಿ ಬ್ರಹ್ಮಾವರ ರಸ್ತೆ)	ರೂ. 60.38 ಲಕ್ಷ
2.	3054 ವಿಶೇಷ ಅನುದಾನ (ಉಡುಪಿ ತಾ: ಸಂತೆಕಟ್ಟೆ ಕೆಮ್ಮಣ್ಣು-ಹೊಡೆ-ಬೆಂಗ್ರೆ ರಸ್ತೆ)	ರೂ. 10.00 ಲಕ್ಷ
3.	3054 ಯೋಜನೇತರ	ರೂ. 41.00 ಲಕ್ಷ
	ಒಟ್ಟು	ರೂ. 111.38 ಲಕ್ಷ

ಈ) ಮಾರ್ಚ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. 3054 ಯೋಜನೇತರ ಶೀರ್ಷಿಕೆಯಡಿಯಲ್ಲಿ ಕಾಲ ಕಾಲಕ್ಕೆ ಮಾಡಬೇಕಾದ ನಿರ್ವಹಣೆ ಮತ್ತು ದುರಸ್ತಿ ಕೆಲಸ ಮಾಡಲಾಗಿದೆ.

ಬೆಂಗಳೂರು ನಗರದ ವಿಧಾನಸಭಾ ಕ್ಷೇತ್ರಗಳಲ್ಲಿ ಯುವ ಡಾಟ್ ಕಾಮ್ ಯೋಜನೆಯ ಅನುಷ್ಠಾನ

59 (41) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ವತಿಯಿಂದ ಬೆಂಗಳೂರು ನಗರದ ವಿಧಾನ ಸಭಾ ಕ್ಷೇತ್ರಗಳಲ್ಲಿ ಯುವ ಡಾಟ್ ಕಾಮ್ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಬೆಂಗಳೂರು ನಗರದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಕೇಂದ್ರಗಳನ್ನು ತೆರೆಯಲಾಗಿದೆ;

ಇ) ಇದರಿಂದ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ನಿರುದ್ಯೋಗಿಗಳು ತರಬೇತಿ ಪಡೆದುಕೊಳ್ಳುತ್ತಿದ್ದಾರೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು) :

ಅ) ಹೌದು.

ಆ) ಬೆಂಗಳೂರು ನಗರದ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರದಲ್ಲಿ ತಲಾ ಒಂದರಂತೆ ಒಟ್ಟು 16 ಯುವ ಡಾಟ್ ಕಾಮ್ ಕೇಂದ್ರಗಳನ್ನು ತೆರೆಯಲಾಗಿದೆ.

ಇ) ಅನುಬಂಧ - 1ರಲ್ಲಿ ವಿವರಗಳನ್ನು ನೀಡಲಾಗಿದೆ.

ಅನುಬಂದ - 1

ಬೆಂಗಳೂರಿನ ವಿಧಾನಸಭಾ ಕ್ಷೇತ್ರಗಳಲ್ಲಿರುವ ಯುವ ಡಾಟ್‌ಕಾಂ ತರಬೇತಿ ಕೇಂದ್ರಗಳಲ್ಲಿ ತರಬೇತಿ ಪಡೆಯುತ್ತಿರುವ ನಿರುದ್ಯೋಗಿಗಳ ವಿವರ

ಸಂಖ್ಯೆ	ಸಂಸ್ಥೆಯ ಹೆಸರು	ಸ್ಥಳ	ತರಬೇತಿ ಹೊಂದಿದ / ಹೊಂದುತ್ತಿರುವ ಅಭ್ಯರ್ಥಿಗಳು
01.	ಎಸ್ ಎಸ್ ಐ	ಬಸವನಗುಡಿ	290
02.	ಎನ್ ಐಐಟಿ	ಭಾರತಿನಗರ	826
03.	ಎಸ್ ಎಸ್ ಐ	ಜಯಮಹಲ್	198
04.	ಎನ್ ಐಐಟಿ	ಗಾಂಧಿನಗರ	240
05.	ಕಿಯೊನಿಕ್ಸ್	ಆನೇಕಲ್	551
06.	ಕಿಯೊನಿಕ್ಸ್	ಉತ್ತರಹಳ್ಳಿ	326
07.	ಕಿಯೊನಿಕ್ಸ್	ಯಲಹಂಕ	341
08.	ಕಿಯೋನಿಕ್ಸ್	ಚಾಮರಾಜಪೇಟೆ	656
09.	ಆಪ್ಟೆಕ್	ಬಿನ್ನಿಪೇಟೆ	83
10.	ಆಪ್ಟೆಕ್	ಚಿಕ್ಕಪೇಟೆ	196
11.	ಆಪ್ಟೆಕ್	ಜಯನಗರ	118
12.	ಆಪ್ಟೆಕ್	ಮಲ್ಲೇಶ್ವರಂ	290
13.	ಆಪ್ಟೆಕ್	ರಾಜಾಜಿನಗರ	66
14.	ಆಪ್ಟೆಕ್	ಶಿವಾಜಿನಗರ	234
15.	ಆಪ್ಟೆಕ್	ಶಾಂತಿನಗರ	187
16.	ಆಪ್ಟೆಕ್	ವರ್ತೂರು	73
		ಒಟ್ಟು	4675

ಬನ್ನೇರುಘಟ್ಟ ಸುತ್ತಮುತ್ತಲಿನ ಹಳ್ಳಿಗಳಿಗೆ ಆನೆಗಳ ಹಾವಳಿ

60 (44) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?